

ಲಿವಿಯಾ ಡ್ರಸೆಲ್ಲಾ ಪ್ರತಿಮೆ

'ದ ಫಸ್ಟ್ ರೂಲ್ ಆಫ್ ಪವರ್ ಈಸ್ ಸರ್ವೈವಲ್'. ಓದಿದಾಗಲೇ ಬೆರಗು ಹುಟ್ಟಿಸುವ ಈ ಸಾಲುಗಳನ್ನು ಹೇಳಿದ್ದು ಯಾವ ರಾಜ್ಯಶಾಸ್ತ್ರಜ್ಞನಲ್ಲ, ತತ್ವಜ್ಞನೂ ಅಲ್ಲ. ಬದಲಿಗೆ ಒಂದು ಹೆಣ್ಣು! ಅದೂ ನಿನ್ನೆಮೊನ್ನೆಯಲ್ಲ, ಕ್ರಿ.ಪೂ. 27ರಲ್ಲಿ! ವ್ಯಾಖ್ಯಾನಗಳನ್ನು ಕೊಡುವುದು ಸುಲಭ. ಪ್ರಾಯೋಗಿಕವಾಗಿ ಮಾಡಿತೋರಿಸುವುದು ಕಷ್ಟ. ಆದರೆ ಈ ಹೆಣ್ಣಿನ ಬಾಯಿಯಲ್ಲಿ ಆ ಮಾತು ಹುಟ್ಟಿದ್ದು ದಂತಗೋಪುರದ ಅಂತಃಪುರದಲ್ಲಲ್ಲ. ಬದಲಿಗೆ ರಕ್ತಸಿಕ್ತ ಕತ್ತಿ ತುದಿಯ ಹೊಳಪಿನಲ್ಲಿ. ನಡೆದ ದಾರಿಯನ್ನು ತೋಯಿಸಿದ ನೆತ್ತರ ವಾಸನೆಯಲ್ಲಿ. ತನ್ನವರ ಮೋಹ ಮತ್ತು ಅಧಿಕಾರದ ದಾಹದ ನಡುವಿನ ಸಂಘರ್ಷದ ಕಿಡಿಯಲ್ಲಿ. ಯಾರು ಆ ಮಹಿಳೆ?

## ಲಿವಿಯಾ ಡ್ರಸೆಲ್ಲಾ!

ರೋಮ್‌ನ ಮೊದಲ ಸಾಮ್ರಾಟ ಆಗಸ್ಟಸ್‌ನ ಹೃದಯ ಸಾಮ್ರಾಜ್ಯವನ್ನಾಳಿದವಳೇ ಲಿವಿಯಾ ಡ್ರಸೆಲ್ಲಾ. ಬರೀ ಹೃದಯ ಸಾಮ್ರಾಜ್ಯವನ್ನಷ್ಟೇ ಅಲ್ಲ, ರೋಮ್ ಸಾಮ್ರಾಜ್ಯವನ್ನೂ ಅನಭಿಷಕ್ತವಾಗಿ ಆಳಿದ ಹೆಣ್ಣು. ರೋಮ್‌ನ ಸಿವಿಲ್ ವಾರ್‌ನಲ್ಲಿ ತಂದೆ ಮತ್ತು ಗಂಡನ ಎದುರಾಳಿಯಾಗಿದ್ದ ಆಗಸ್ಟಸ್‌ನ ಪ್ರೀತಿಗಾಗಿ ಹಂಬಲಿಸಿ ದಕ್ಕಿಸಿಕೊಂಡ ದಿಟ್ಟ ಪ್ರೇಮಿ. ಮೊದಲನೇ ಗಂಡನಿಂದ ಪಡೆದ ಒಬ್ಬ ಮಗನ ಜೊತೆಗೆ ಗರ್ಭದಲ್ಲಿ ಮೂರು ತಿಂಗಳ ಶಿಶುವಿಟ್ಟುಕೊಂಡು ಆಗಸ್ಟಸ್‌ನ ವರಿಸಿದ ಮಹಾತ್ವಾಕಾಂಕ್ಷಿ ಮಹಿಳೆ. ಮೊದಲನೇ ಗಂಡನ ಮಗನನ್ನು ರೋಮ್ ಸಾಮ್ರಾಟನಾಗಿಸಲು ಪಟ್ಟದ ಇತರ ಆಕಾಂಕ್ಷಿಗಳನ್ನು ಒಬ್ಬರ ಹಿಂದೊಬ್ಬರಂತೆ ಹತ್ಯೆಗೈದ ಪಾತಕಿ. ಪ್ರೀತಿ ಮತ್ತು ದ್ವೇಷವನ್ನು ಸಮಾನವಾಗಿ ಉಂಡು–ಉಗುಳಿ ಬದುಕಿದ ಅಸಾಮಾನ್ಯೆ.

ಇತಿಹಾಸದಲ್ಲಿ ಖಳಪಾತ್ರವಾಗಿಯೇ ಚಿತ್ರಿತವಾಗಿರುವ ಲೀವಿಯಾಳನ್ನು ಕುರಿತು ಇತ್ತೀಚೆಗೆ ಅಮೆರಿಕದ ಟೀವಿ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಡೊಮಿನಾ' ಎಂಬ ಸಿರೀಸ್, ಅವಳ ವ್ಯಕ್ತಿತ್ವದ ಮತ್ತೊಂದು ಆಯಾಮವನ್ನು ಚಿತ್ರಿಸುತ್ತಿದೆ.

ಚರಿತ್ರೆಯ ಪುಸ್ತಕಗಳಲ್ಲಿ ಚಕ್ರವರ್ತಿಗಳಿಗೆ ಇರುವಷ್ಟು ಮಹತ್ವ, ಲಿವಿಯಾಗೆ ಇರದಿರುವುದು ಆಕಸ್ಮಿಕವೇನೂ ಅಲ್ಲ. ಹೆಣ್ಣೊಬ್ಬಳು, ರೋಮ್ ಸಾಮ್ರಾಜ್ಯವನ್ನು ಆಳಿದಳು, ತನ್ನ ಅಧಿಕಾರದ ದಾರಿಯಲ್ಲಿ ಅಡ್ಡಬಂದವರನ್ನು ನಿರ್ದಾಕ್ಷಿಣ್ಯವಾಗಿ ಹೊಸಕಿಹಾಕಿದಳು, ಅಧಿಕಾರ ಕ್ರೌರ್ಯದ ಹೊಸ ಹೊಸ ರೂಪಗಳನ್ನು ತೋರಿಸುತ್ತಲೇ ಆ ಕಾಲಕ್ಕೆ ಅಸಾಮಾನ್ಯವೆನಿಸುವ ಹಲವು ಸುಧಾರಣೆಗಳಿಗೂ ಕಾರಣಳಾದಳು ಎನ್ನುವುದನ್ನು ಪುರುಷನಿರೂಪಿತ ಇತಿಹಾಸ ಒಪ್ಪಿಕೊಳ್ಳುವುದು ಸುಲಭವೇ?

ರೋಮ್ ಇತಿಹಾಸದಲ್ಲಿ ಜಗಜ್ಜನಿತವಾದ ಜೂಲಿಯಸ್ ಸೀಸರ್, ಮಾರ್ಕ್ ಆಂಟನಿ, ಆತನ ಪ್ರೇಯಸಿ ಈಜಿಪ್ಟ್‌ನ ರಾಣಿ ಕ್ಲಿಯೋಪಾತ್ರಳ ಇತಿಹಾಸ ಕೆದಕಿದರೆ ಅಲ್ಲಿ ಆಗಸ್ಟಸ್ ಕಾಣುತ್ತಾನೆ. ಅವನ ಬೆನ್ನ ಹಿಂದೆ ಲಿವಿಯಾ ಡ್ರಸೆಲ್ಲಾ ಸಿಗುತ್ತಾಳೆ.

## ಬೆಂಕಿಯಲ್ಲಿ ಅರಳಿದ ಪ್ರೇಮ

ಆಗಸ್ಟಸ್, ಜ್ಯೂಲಿಯಸ್ ಸೀಸರ್‌ನ ಸೋದರಳಿಯ. ಜೂಲಿಯಸ್ ಸೀಸರನ ಹತ್ಯೆಯ ನಂತರ ಉಂಟಾದ ಅರಾಜಕತೆಯನ್ನು ಬಳಸಿಕೊಂಡು ಕ್ಲಿಯೋಪಾತ್ರಳನ್ನು ಮುಂದಿಟ್ಟುಕೊಂಡು ಆಡಳಿತ ನಡೆಸುವ ಮಾರ್ಕ್ ಆಂಟನಿ ವಿರುದ್ಧ ಆಗಸ್ಟಸ್ ಸಿಡಿದೇಳುತ್ತಾನೆ. ಈ ಆಗಸ್ಟಸ್‌ನ ತಂಗಿ ಮಾರ್ಕ್ ಆಂಟನಿಯ ಹೆಂಡತಿ. ಸಂಬಂಧಿಗಳ ನಡುವೆಯೇ ಅಧಿಕಾರಕ್ಕಾಗಿ ನಾಲ್ಕು ವರ್ಷಗಳ ಕಾಲ ನಡೆದ ತಿಕ್ಕಾಟದ ಕಿಡಿಗಳ ನಡುವೆಯೇ ಆಗಸ್ಟಸ್ ಮತ್ತು ಲಿವಿಯಾ ಡ್ರಸೆಲ್ಲಾ ನಡುವೆ ಪ್ರೇಮದ ಹೂವು ಅರಳುತ್ತದೆ.

ಲಿವಿಯಾ ಆಗಸ್ಟಸ್‌ನ ಶೌರ್ಯದ ಬಗ್ಗೆ ಮೊದಲು ಕೇಳಿದ್ದು ಗಂಡ ಮತ್ತು ತಂದೆಯ ಬಾಯಿಯಲ್ಲಿ! ಅವಳ ಅಪ್ಪ ಮತ್ತು ಗಂಡ ಇಬ್ಬರೂ ಮಾರ್ಕ್ ಆಂಟನಿಯ ಪರವಾದ ಗುಂಪಿನಲ್ಲಿರುತ್ತಾರೆ. ಅಂದರೆ ಲಿವಿಯಾಳ ಪಾಲಿಗೆ ಆಗಸ್ಟಸ್ ಶತ್ರುಪಾಳಯದ ನಾಯಕ. ಆಂತರಿಕ ಯುದ್ಧದ ಕುಲುಮೆಯಲ್ಲಿ ಇವರ ಪ್ರೇಮವೂ ಬೇಯುತ್ತ ಕಾಯುತ್ತ ಹದಗೊಳ್ಳುತ್ತದೆ. ಕೊನೆಗೆ ಆಗಸ್ಟಸ್ ಗುಂಪಿನ ಕೈ ಮೇಲಾಗಿ, ಮಾರ್ಕ್ ಆಂಟನಿ ಮತ್ತು ಕ್ಲಿಯೋಪಾತ್ರ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸಾಮ್ರಾಜ್ಯವನ್ನೇ ಗೆದ್ದ ಆಗಸ್ಟಸ್, ಲಿವಿಯಾಳ ಪ್ರೇಮಯುದ್ಧದಲ್ಲಿ ಸೋತು ಶರಣಾಗಿರುತ್ತಾನೆ.

ತನ್ನ ಗಂಡನಿಗೆ ವಿಚ್ಛೇದನ ನೀಡಿ ಆಗಸ್ಟಸ್ ಕೈ ಹಿಡಿದಾಗ ಲಿವಿಯಾ ಮೂರು ತಿಂಗಳ ಗರ್ಭಿಣಿ! ಆಗಸ್ಟಸ್ ಕೂಡ ತನ್ನ ಮೊದಲನೇ ಹೆಂಡತಿಗೆ ಮಗು ಹುಟ್ಟಿದ ದಿನವೇ ಅವಳಿಗೆ



ಲಿವಿಯಾ ಡ್ರಸೆಲ್ಲಾ ಬದುಕನ್ನು ಆಧರಿಸಿದ ಟೀವಿ ಸಿರೀಸ್ 'ಡೊಮಿನಾ'ದ ದೃಶ್ಯ